**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 964 |
| ಸದಸ್ಯರ ಹೆಸರು | : ಶ್ರೀ ಸಿ.ಆರ್.ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 13-03-2020 |
| ಉತ್ತರಿಸುವವರು | : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಗ್ರಾಮ ಪಂಚಾಯತಿಗಳಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ: 159.<br><br>ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ: 151.<br><br>ವಿಧಾನಸಭಾ ಕ್ಷೇತ್ರವಾರು ಗ್ರಾಮ ಪಂಚಾಯತಿ ಗ್ರಂಥಾಲಯಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಆ) | ಈ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಪಾಲಕರು/ಮೇಲ್ವಿಚಾರಕರ ಹುದ್ದೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಯಲ್ಲಿ 156 ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 149 ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ವಿಧಾನಸಭಾ ಕ್ಷೇತ್ರವಾರು ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಯ ವಿವರವನ್ನು ಅನುಬಂಧ-02ರಲ್ಲಿ ನೀಡಿದೆ. |
| (ಇ) | ಈ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಪಾಲಕರು/ಮೇಲ್ವಿಚಾರಕರುಗಳಿಗೆ ಸರ್ಕಾರಿ ಪ್ರಸ್ತುತ ನೀಡುತ್ತಿರುವ ವೇತನ ಹಾಗೂ ಇತರೆ ಭತ್ಯೆಗಳ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರಿಗೆ ಮಾಸಿಕ ರೂ.7000/-ಗಳ ಗೌರವಧನವನ್ನು ಪಾವತಿಸಲಾಗುತ್ತಿದೆ. |
| (ಈ) | ಈ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಪಾಲಕರು/ಮೇಲ್ವಿಚಾರಕರುಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು; ಇವರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಗ್ರಾಮ ಪಂಚಾಯತಿ ಗ್ರಂಥಾಲಯ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ರೂ.13,200/- ಪಾವತಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಗಾಗಿ ಕಳುಹಿಸಲಾಗಿತ್ತು. ಪ್ರಸ್ತುತ ನೀಡಲಾಗುತ್ತಿರುವ ಗೌರವ ಸಂಭಾವನೆಯನ್ನು ಕಾರ್ಮಿಕ ಇಲಾಖೆಯ ಕನಿಷ್ಠ ವೇತನಕ್ಕೆ ಹೋಲಿಸಲು ಸಾಧ್ಯವಿಲ್ಲ, ಇದು ಗೌರವ ಸಂಭಾವನೆ ಹಾಗೂ ಕನಿಷ್ಠ ವೇತನವು ಸಂಪೂರ್ಣ ದಿನದ (8 ಗಂಟೆಗಳ ಕಾಲ) ಕಾರ್ಯಕ್ಕೆ ಇರುತ್ತದೆ. ಗ್ರಂಥಾಲಯ ಮೇಲ್ವಿಚಾರಕರು ಗೌರವ ಸಂಭಾವನೆ ಮೇರೆಗೆ 4 ಗಂಟೆಗಳ ಕಾಲ ಕೆಲಸ ಮಾಡುತ್ತಿರುವುದರಿಂದ ಇದನ್ನು ಕಾರ್ಮಿಕ ನೀತಿಯಲ್ಲಿ ತರಲು ಸಾಧ್ಯವಿಲ್ಲವಿರುವುದಿಲ್ಲವೆಂದು ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿರುತ್ತದೆ.<br><br>ಪ್ರಸ್ತುತ ಗ್ರಂಥಾಲಯ ಮೇಲ್ವಿಚಾರಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಉ) | ಹಾಗಿದ್ದಲ್ಲಿ ಯಾವಾಗ ಖಾಯಂಗೊಳಿಸಲಾಗುವುದು; ಹಾಗಾದರೆ, ಇವರುಗಳನ್ನು ಖಾಯಂಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು? | ಅನ್ವಯಿಸುವುದಿಲ್ಲ. |

ಸಂ. ಗ್ರಾಅಪ 262 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

## ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 964 ಕ್ಕೆ ಅನುಬಂಧ-1

ವಿಧಾನಸಭೆ ಕ್ಷೇತ್ರವಾರು ಗ್ರಾಮ ಪಂಚಾಯತಿ ಗ್ರಂಥಾಲಯಗಳ ಮಾಹಿತಿ

| ಕ್ರ. ಸಂ. | ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಹೆಸರು | ವಿಧಾನ ಸಭೆ ಕ್ಷೇತ್ರಗಳ ಹೆಸರು | ಗ್ರಾ.ಪಂ.ಗ್ರಂ.ಗಳ ಸಂಖ್ಯೆ |
|---|---|---|---|
| 1 | 2 | 3 | 4 |
| 1. | ಕೋಲಾರ | ಕೋಲಾರ | 28 |
| | | ಬಂಗಾರಪೇಟೆ | 26 |
| | | ಕೆ.ಜಿ.ಎಫ್ | 15 |
| | | ಮಾಲೂರು | 28 |
| | | ಮುಳಬಾಗಲು | 30 |
| | | ಶ್ರೀನಿವಾಸಪುರ | 32 |
| | | **ಒಟ್ಟು** | **159** |
| 2. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 22 |
| | | ಶಿಡ್ಲಘಟ್ಟ | 27 |
| | | ಚಿಂತಾಮಣಿ | 34 |
| | | ಗೌರಿಬಿದನೂರು | 37 |
| | | ಬಾಗೇಪಲ್ಲಿ | 31 |
| | | **ಒಟ್ಟು** | **151** |

## ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 964 ಕ್ಕೆ ಅನುಬಂಧ-2

ವಿಧಾನಸಭೆ ಕ್ಷೇತ್ರವಾರು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳ ವಿವರ :

| **1** | **2** | **3** | **4** |
|---|---|---|---|
| ಕ್ರ. ಸಂ. | ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಹೆಸರು | ವಿಧಾನ ಸಭೆ ಕ್ಷೇತ್ರಗಳ ಹೆಸರು | ಗ್ರಾ.ಪಂ.ಗ್ರಂ.ಗಳ ಸಂಖ್ಯೆ |
| 1 | ಕೋಲಾರ | ಕೋಲಾರ | 26 |
| | | ಬಂಗಾರಪೇಟೆ | 26 |
| | | ಕೆ.ಜಿ.ಎಫ್ | 15 |
| | | ಮಾಲೂರು | 27 |
| | | ಮುಳಬಾಗಲು | 30 |
| | | ಶ್ರೀನಿವಾಸಪುರ | 32 |
| | | **ಒಟ್ಟು** | **156** |
| 2. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 22 |
| | | ಶಿಡ್ಲಘಟ್ಟ | 27 |
| | | ಚಿಂತಾಮಣಿ | 33 |
| | | ಗೌರಿಬಿದನೂರು | 37 |
| | | ಬಾಗೇಪಲ್ಲಿ | 30 |
| | | **ಒಟ್ಟು** | **149** |